ರವೀಂದ್ರನಾಥ ಯಡಹಳ್ಳಿ, ಬೀಳಗಿ
*ಗಂಧರ್ವಕನ್ಯೆಗೂ, ಮತ್ಸ್ಯಕನ್ಯೆಗೂ ಇರುವ ವ್ಯತ್ಯಾಸವೇನು ಶಿವಾ?*



ಎಚ್ಚರ; ಒಬ್ಬಳು ಹಾರಿಹೋಗುವುದರಲ್ಲಿ ಎಕ್ಸ್‌ಪರ್ಟ್, ಇನ್ನೊಬ್ಬಳು ನುಣುಚಿಕೊಳ್ಳುವುದರಲ್ಲಿ ಎಕ್ಸ್‌ಪರ್ಟ್.

ಮೈಸೂರು ಕುಸುಮ, ಶ್ರವಣಬೆಳಗೊಳ
*ಬೇರೆಯವರ ಸಮಸ್ಯೆಗೆ ಪರಿಹಾರ ಸೂಚಿಸುವ ನಾವು ಅದೇ ಸಮಸ್ಯೆ ನಮಗೆ ಬಂದಾಗ ನಿರುತ್ತರರಾಗುವವೆಲ್ಲಾ?*
ಸಮಸ್ಯೆ ಕಣ್ಣಿನ ಪೊರೆ ಇದ್ದಂತೆ. ಅನುಭವಿಸುವವರಿಗೆ ಮಬ್ಬು, ಕಾಣುವವರಿಗೆ ನಿಚ್ಚಳ.

ಟಿ.ಆರ್. ರವೀಂದ್ರ, ಬೆಂಗಳೂರು
*ಸುಂದರವಾದ ಅವಳಿಜವಳಿ ಹುಡುಗಿಯರು ನನ್ನನ್ನು ಪ್ರೀತಿಸುತ್ತಿದ್ದಾರೆ. ನಾನು ಈಗ ಏನು ಮಾಡಬೇಕು?*
ಛೆ! ಅಲ್ಲೂ ಅದೇ ಮುಖ, ಇಲ್ಲೂ ಅದೇ ಮುಖ! ವೆರೈಟೀನೇ ಇರಲ್ಲ. ಮೂರನೆಯವಳನ್ನು ಹುಡುಕಿಕೊಳ್ಳಬೇಕು!

ಕೇಶವ ಎನ್. ಪೈ, ಕಾಸರಕೋಡ
*ಮಹಿಳೆಯನ್ನು 'ಭೂಮಿ ತೂಕದ ಹೆಣ್ಣು' ಎಂದು ಹೊಗಳಲು ಕಾರಣ?*




ಅದು ಹೊಗಳಿಕೆಯಲ್ಲ, ಜಾಣ್ಮೆ. ಘುಮ್ಮಿ ಅಂದ್ರೆ ರೇಗ್ತಾಳೇಂತ...

ಉಷಾ ಸೋಗಲ್, ತುರಹಳ್ಳಿ
*ಕರೆಂಟ್ ಕಂಡುಹಿಡಿಯದೆ ಇದ್ದಿದ್ದರೆ ಜೀವನ ಹೇಗಿರುತ್ತಿತ್ತು?*
ಲೇಟಾಗಿ ಬಂದಾಗ ಹೆಂಡ್ತೀನ ಎಬ್ಬಿಕ್ಕೆ ಒಂದು ಪಾರ್ಲಿಮೆಂಟ್ ಸೆಷನ್‌ನಷ್ಟು ಗಲಾಟೆ ಮಾಡ್ಬೇಕಾಗ್ತಿತ್ತು.

ಹಾಡ್ಯ. ಬಿ. ಜಯಾನಂದ, ಮೈಸೂರು
*ಅರಿವು ಹೆಚ್ಚಾದಂತೆಲ್ಲ ಅರಿವೆ ಕಡಿಮೆ ಆಗುವುದೇಕೆ?*
ಅರಿವು ದೇಹದ ಕಣಕಣದಲ್ಲೂ ಸೂಸುತ್ತಿದೆ ಎಂದು ತೋರಿಸಲಂತೆ!

ಎಂ.ಎಸ್. ಗುರುರಾಜಾಚಾರು, ಬಳ್ಳಾರಿ
*ಬೆಂಕಿಕಡ್ಡಿಗೂ, ಹೆಣ್ಣಿಗೂ ಏನು ವ್ಯತ್ಯಾಸ?*
ಹೆಣ್ಣಿನದು ಒಲವೆ ಜೀವನ ಸಾಕ್ಷಾತ್ಕಾರ; ಬೆಂಕಿಕಡ್ಡಿಯದು ಒಲೆಯೆ ಜೀವನ ಸಾಕ್ಷಾತ್ಕಾರ.

ವೈ.ಜಿ. ನರಸಿಂಹನ್, ಬೆಂಗಳೂರು
*ಹೆಂಗಸರು ಮನೆಕೆಲಸದಾಕೆ ಸುಂದರವಾಗಿದ್ದರೆ ಇಷ್ಟಪಡುವುದಿಲ್ಲ. ಯಾಕೆ?*
ಒಂದೇ ಒಂದು ಕಾರಣ– ಗಂಡಸರು ಇಷ್ಟ ಪಡುತ್ತಾರೆ!

ಓಂ ಚನ್ನೇಶ್, ಭದ್ರಾವತಿ
ಮೊದಲನೆ ನೋಟಕೆ ನಿನ್ನ ಮೇಲೆ ನನಗೆ ಮನಸಾಯ್ತು ಅಂತಾಳಲ್ಲಾ, ಏನ್ಮಾಡ್ಲಿ?
ತಪ್ಪು ತಿದ್ದಿಕೊಳ್ಳಲು ಅವಕಾಶ ಕೊಡಿ. ಟೇಕ್ ಎ ಸೆಕೆಂಡ್ ಲುಕ್ ಅನ್ನಿ.

ಹೆಚ್.ವಿ. ರಂಗನಾಥ, ಬೆಂಗಳೂರು
*ಪುನರ್ಜನ್ಮದಲ್ಲಿ ನಂಬಿಕೆ ಇರುವವರೂ ಸಾವಿಗೇಕೆ ಅಂಜುತ್ತಾರೆ?*
ಪುನರಪಿ ಜನನ ಆಗಬೇಕಲ್ಲ. ಹೆಣ್ಣಾಗಿ ಹುಟ್ಟಿ ಭ್ರೂಣದಲ್ಲೇ ಕಥಕ್ ಅನ್ನಿಸ್ಬಿಟ್ರೇಂತ ಭಯ!

ಮೋಹನರಾಜು ಎಸ್.ಎ., ಶಿವಮೊಗ್ಗ
*ನಗೆಕೂಟಕ್ಕೆ ಸದಸ್ಯರಾಗಲು ಇರಬೇಕಾದ ಅರ್ಹತೆಗಳೇನು?*
ತೂಗುದೀಪ ಶ್ರೀನಿವಾಸ್, ವಜ್ರಮುನಿಯಂತೆ ವಿಕಟಾಟ್ಟಹಾಸ ಮಾಡಲು ಕಲಿತಿರಬೇಕು.

ಎಸ್.ಎನ್.ಮಹಾಬಲರಾವ್, ಎನ್.ಆರ್.ಪುರ
*ಅಶ್ವಮೇಧಕ್ಕೆ ಹೊರಟ ಕುದುರೆಯನ್ನು ಜಟಕಾ ಸಾಬಿ ಕಟ್ಟಿಹಾಕಿದರೆ?*
ಜೊತೆಗೊಂದು ಗಾಡಿ ಕೊಡಿಸಿ ಸಂಬಳ ಕೊಟ್ಟುಬಿಡಿ. ಅವನ ಸಾಮ್ರಾಜ್ಯ ನಿಮಗೇ ಸೇರಿಬಿಡುತ್ತದೆ.

ಕೆ.ಎಂ. ಲಿಂಗರಾಜು, ನಂಜನಗೂಡು
*ಸಾರಾಯಿಭಾಗ್ಯ ಜಾರಿಗೆ ಬರಬಾರದೇಕೆ?*
ಬೇಡ. ಜಾರಿಗೆ ಬಂದರೆ ಮೋರಿಗೆ ಬೀಳುವವರು ಹೆಚ್ಚಾಗಿ ಡ್ರೈನ್ ಬ್ಲಾಕ್ ಆದೀತು.

## ಬಹುಮಾನಿತ ಪ್ರಶ್ನೆ

ಎ.ಕೆ. ಪಟ್ಟಾಭಿ, ಬೆಂಗಳೂರು
*ಮಂತ್ರಶಕ್ತಿಗೂ, ಮಂತ್ರಿಶಕ್ತಿಗೂ ಇರುವ ವ್ಯತ್ಯಾಸವೇನು?*
ಮಂತ್ರಶಕ್ತಿಗೆ ಮಾವಿನಕಾಯಿ ಉದುರಲ್ಲ. ಮಂತ್ರಿಶಕ್ತಿಗೆ ಮಾವಿನ ತೋಪೇ ಲೇಔಟ್ ಆಗ್ಬಿಡತ್ತೆ.

ಚಾಂದ್‌ಬಾಷ, ಚಿಕ್ಕೋಬನಹಳ್ಳಿ
*ಹೆಚ್ಚು ಕುಟುಂಬಗಳಲ್ಲಿ ಪತ್ನಿಗಿಂತಲೂ ಮೊದಲೇ ಪತಿ ದೈವಾಧೀನವಾಗುವುದು ಏಕೆ?*
ಎಲ್ಲಿಗೇ ಆಗಲಿ, ಮೊದಲು ಹೋಗಿ ಹೆಂಡತಿಗೆ ಸೀಟ್ ರಿಸರ್ವ್ ಮಾಡಿಸುವುದು ಗಂಡನ ಕೆಲಸ!

ಜಗದೀಶ್ ನಾಯಕ್, ಉಡುಪಿ
*ಈಗಿನ ಕಾಲದಲ್ಲಿ ಒಳ್ಳೆಯವರಾದಷ್ಟೂ ಹೆಚ್ಚು ಕಷ್ಟ ಪಡಬೇಕಾಗುತ್ತಲ್ಲ, ಏಕೆ ಸಾರ್?*
ಬಂದಿದ್ದಕ್ಕೆಲ್ಲಾ ಸೂಪರ್ ಟ್ಯಾಕ್ಸ್ ಕಟ್ಟಿದರೆ ಉಳಿಯೋದು ರಶೀದಿ ಮಾತ್ರ ಆದ್ದರಿಂದ.

ನಾಗವೇಣಿ ಸೋಮಶೇಖರ್, ಮೈಸೂರು
*ಸಮುದ್ರವಿರುವುದು ಪ್ರಪಂಚದ ಮೇಲೆ. ಹೀಗಿರುವಾಗ ಹಿರಣ್ಯಾಕ್ಷ ಪ್ರಪಂಚವನ್ನು ಕದ್ದು ಸಮುದ್ರದಲ್ಲಿ ಬಚ್ಚಿಡಲು ಹೇಗೆ ಸಾಧ್ಯ?*



ಅಕ್ವೇರಿಯಂ ನೀರನ್ನು ಖಾಲಿ ಮಾಡಿದಂತೆ ಪ್ರಪಂಚದಿಂದ ನೀರನ್ನು ತೆಗೆದು ವಿಶ್ವಪಾತ್ರೆಗೆ ಸುರಿದು ಅದರಲ್ಲಿ ಬಚ್ಚಿಟ್ಟನಂತೆ.

ಮಹೇಶ್ ಸಣ್ಣಗಿರಿ, ಕೊಟ್ಟೂರು
*ಸಾವಿರ ಸುಳ್ಳು ಹೇಳಿ ಮದುವೆ ಮಾಡು ಎನ್ನುತ್ತಾರೆ. ಹಾಗಾದರೆ ಎಷ್ಟು ಸುಳ್ಳು ಹೇಳಿ ಪ್ರೀತಿ ಮಾಡಬೇಕು?*
'ಯೂ ಆರ್ ಬ್ಯೂಟಿಫುಲ್' ಎಂಬ ಒಂದೇ ಒಂದು ಸುಳ್ಳು ಸಾಕು.

ಆರತಿ ಘಟಿಕಾರ್, ದುಬೈ
*ಆಫೀಸಿನಲ್ಲಿ ಎಡವಟ್ಟು ಮಾಡಿಕೊಂಡ ದಿನದಂದು ಗಂಡಸರು ಮನೆಯಲ್ಲಿ ಮೌನ ವಹಿಸುವುದೇಕೆ?*
ಒಂದೇ ತಪ್ಪಿಗೆ ಎರಡೆರಡು ಶಿಕ್ಷೆ ತಪ್ಪಿಸಿಕೊಳ್ಳಕ್ಕೆ.

■ ರಾಮ್